

# ರಮಣೀಯ ರಾಣಿಪುರಂ

ವರ್ಷದ ಹೆಚ್ಚಿನೆಲ್ಲ ಋತುಗಳಲ್ಲೂ ತಂಪಾದ ಹವಾಮಾನ ಹೊಂದಿದ್ದು, ಪ್ರವಾಸಿಗರನ್ನು ಆಕರ್ಷಿಸುವ ಕಾರಣದಿಂದಾಗಿ ಇದನ್ನು 'ಕೇರಳದ ಊಟಿ' ಎಂದು ಕರೆಯುತ್ತಾರೆ.

ಚಿತ್ರ– ಲೇಖನ: **ಹರೀಶ್ ಹಳೆಮನೆ**



ಬೆಟ್ಟದ ಮೇಲಿಂದ ರೆಸಾರ್ಟ್‌ಗಳ ನೋಟ



ಕೇರಳ–ಕರ್ನಾಟಕ ಗಡಿನಾಡಾಗಿರುವ ಕಾಸರಗೋಡು ಜಿಲ್ಲೆ ಪ್ರವಾಸೀ ತಾಣಗಳಿಗೂ ಪ್ರಸಿದ್ಧ. ಇಲ್ಲಿನ ಬೇಕಲಕೋಟೆ 'ಕೋಟೆಗಳ ನಾಡು' ಎಂದೇ ಹೆಸರುವಾಸಿ.

ಕಾಸರಗೋಡು ಜಿಲ್ಲೆಯ ಪ್ರವಾಸೋದ್ಯಮದ ಪಟ್ಟಿಯಲ್ಲಿ ಇತ್ತೀಚೆಗೆ ಸೇರ್ಪಡೆಯಾದ ಹೆಸರು 'ರಾಣಿಪುರಂ' ಹಿಲ್‌ಸ್ಟೇಷನ್. ಕರಾವಳಿಯ ಜನರಿಗೆ ಒಂದು ದಿನದ ಚಾರಣಕ್ಕೆ ಅತ್ಯಂತ ಸೂಕ್ತವಾದ ತಾಣವಾಗಿದೆ. ಕೊಡಗು ಜಿಲ್ಲೆಯನ್ನು ಸಂದರ್ಶಿಸುವವರಿಗೆ ಇದು ಹೆಚ್ಚೇನೂ ದೂರವಾಗದು.

ಕಾಸರಗೋಡು ರೈಲ್ವೇ ನಿಲ್ದಾಣದಿಂದ 85 ಕಿ.ಮೀ. ದೂರದಲ್ಲಿದೆ ರಾಣಿಪುರಂ. ಸಮೀಪದ ರೈಲ್ವೇ ನಿಲ್ದಾಣವೆಂದರೆ ಕಾಞಂಗಾಡ್ (45 ಕಿ.ಮೀ). ರಾಣಿಪುರಂ ಹಿಲ್‌ಸ್ಟೇಷನ್ ಹೊಸದುರ್ಗ ತಾಲೂಕಿನ ಪನತ್ತಡಿ ಗ್ರಾಮ ಪಂಚಾಯತ್‌ನ ವ್ಯಾಪ್ತಿಯಲ್ಲಿ ಬರುತ್ತದೆ. ಕಾಞಂಗಾಡಿನಿಂದ ಪಾಣತ್ತೂರು ದಾರಿಯಾಗಿ ಕರಿಕ್ಕೆ, ಭಾಗಮಂಡಲಕ್ಕೆ ಹೋಗುವಾಗ ಪನತ್ತಡಿ ಸಿಗುತ್ತದೆ. ಇಲ್ಲಿಂದ ರಾಣಿಪುರಮ್‌ಗೆ ರಸ್ತೆಯ ಸೌಕರ್ಯವಿದೆ.

ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಬರುವ ರಾಣಿಪುರಂ ಹಿಲ್‌ಸ್ಟೇಷನ್ ಸಮುದ್ರ ಮಟ್ಟದಿಂದ 750 ಮೀಟರ್ ಎತ್ತರದಲ್ಲಿದೆ. ವರ್ಷದ ಹೆಚ್ಚಿನೆಲ್ಲ ಋತುಗಳಲ್ಲೂ ಇಲ್ಲಿ ಪ್ರವಾಸಿಗರನ್ನು ಕಾಣಬಹುದು.

ರಾಣಿಪುರಂಗೆ ಮಾಡತ್ತುಮಲ ಎಂಬ ಹೆಸರು ಹಿಂದಿನ ಕಾಲದಲ್ಲಿತ್ತು. ಆಗಿನ ಕಾಲದಲ್ಲಿ ಈ ಊರು ಅಷ್ಟೊಂದು ಪ್ರಸಿದ್ಧವಾಗಿರಲಿಲ್ಲ. ಬ್ರಿಟಿಷರ ಕಾಲದಲ್ಲಿ ರಾಣಿಯ ಗೌರವಾರ್ಥವಾಗಿ 'ರಾಣಿಪುರಂ' ಎಂಬ ಹೆಸರು ಅಸ್ತಿತ್ವಕ್ಕೆ ಬಂತು. ಗಮನಿಸಬೇಕಾದ ಅಂಶವೆಂದರೆ, ಇಲ್ಲಿ ಪಕ್ಕದಲ್ಲಿ 'ರಾಜಾಪುರಂ' ಎಂಬ ಹೆಸರಿನ ಊರು ಕೂಡ ಇದೆ. ವರ್ಷದ ಹೆಚ್ಚಿನ ಕಾಲದಲ್ಲೂ ತಂಪಾದ ಹವೆಯಿರುವ ಬೆಟ್ಟ ಪ್ರದೇಶಗಳನ್ನು ಬ್ರಿಟಿಷರು ಇಷ್ಟಪಡುತ್ತಿದ್ದರು. ಕೇರಳ ಸರಕಾರ ಪ್ರವಾಸೋದ್ಯಮಕ್ಕೆ ಪ್ರಾತಿನಿಧ್ಯ ನೀಡಿದ ಸಮಯದಲ್ಲಿ ಈ ಹಿಲ್‌ಸ್ಟೇಷನ್ ಪ್ರಾಮುಖ್ಯ ಪಡೆಯಿತೆನ್ನಬಹುದು. ಕೇರಳದ ಉತ್ತರ ಜಿಲ್ಲೆಯಾದುದರಿಂದ ಈ ಹಿಂದೆ ಸ್ವಲ್ಪಮಟ್ಟಿನ ಅವಗಣನೆಗೆ ಒಳಗಾಗಿದ್ದಿರಬಹುದು.

ವರ್ಷದ ಹೆಚ್ಚಿನೆಲ್ಲ ಋತುಗಳಲ್ಲೂ ತಂಪಾದ ಹವಾಮಾನ ಹೊಂದಿದ್ದು, ಪ್ರವಾಸಿಗರನ್ನು ಆಕರ್ಷಿಸುವ ಕಾರಣದಿಂದಾಗಿ ಇದನ್ನು 'ಕೇರಳದ ಊಟಿ' ಎಂದು ಕರೆಯುತ್ತಾರೆ. ಶೋಲಾ ಕಾಡು ಹಾಗೂ ಹುಲ್ಲುಗಾವಲು ಇಲ್ಲಿನ ವೈಶಿಷ್ಟ್ಯ. ಸುಮಾರು 3–4 ಕಿ.ಮೀ ಕಡಿದಾದ ಚಾರಣ ಮಾಡಬೇಕಾಗುತ್ತದೆ. ವಿವಿಧ ಜಾತಿಯ ಮರಗಳ ನಡುವೆ ಚಾರಣ ಮಾಡುವ ಖುಷಿಯೇ ಬೇರೆ.